## ವಿವೇಕಚೂಡಾಮಣಿ ಶ್ರೀ ಶೃಂಗೇರಿ ಜಗದ್ಗುರು ಶ್ರೀ ಶ್ರೀ ಚಂದ್ರಶೇಖರ ಭಾರತೀಮಹಾಸ್ವಾಮಿಗಳವರ

# ವ್ಯಾಖ್ಯಾನದ ಸ್ಥೂಲಪರಿಚಯ

ವಿದ್ಯೆಗಳಲ್ಲಿ ಶ್ರೇಷ್ಠವಾದದ್ದು ಅಧ್ಯಾತ್ಮ ವಿದ್ಯೆ. ಪರಮ ಪುರುಷಾರ್ಥವಾದ ಮೋಕ್ಷಕ್ಕೆ ಸಾಧನವಾದದ್ದು ಇದು. ಆದ್ದರಿಂದಲೇ ಇದನ್ನು ಪರಾವಿದ್ಯಾ—ಶ್ರೇಷ್ಠವಾದ ವಿದ್ಯೆ ಎನ್ನುತ್ತಾರೆ. ಉಪನಿಷತ್ತುಗಳಲ್ಲಿ ಪ್ರತಿಪಾದಿತವಾದದ್ದು ಇದೇ. ಈ ವಿದ್ಯೆಯ ಸ್ಪಷ್ಟೀಕರಣಕ್ಕಾಗಿ ಬ್ರಹ್ಮಸೂತ್ರ, ಭಗವದ್ಗೀತೆ—ಮುಂತಾದ ಗ್ರಂಥಗಳು ಹೊರಟಿವೆ. ಶ್ರೀ ಶಂಕರ ಭಗವತ್ಪಾದರು ದಶೋಪನಿಷತ್ತುಗಳಿಗೂ, ಬ್ರಹ್ಮ ಸೂತ್ರಗಳಿಗೂ ಹಾಗೂ ಭಗವದ್ಗೀತೆಗೂ ವಿಸ್ತಾರವಾದ ಭಾಷ್ಯಗಳನ್ನು ಬರೆದಿರುತ್ತಾರೆ. ಗಂಭೀರ ಶೈಲಿಯಲ್ಲಿ ವಿರಚಿತವಾದ ಈ ಭಾಷ್ಯಗ್ರಂಥಗಳು ವೇದಾಂತದ ವಿಷಯಗಳಲ್ಲಿ ಬರಬಹುದಾದ ಎಲ್ಲ ಸಂದೇಹಗಳನ್ನೂ ನಿವಾರಿಸಿ, ಪರಮತಗಳ ದೂಷಣಗಳನ್ನೂ ಪರಿಹರಿಸಿ, ಭದ್ರವಾದ ತಳಹದಿಯ ಮೇಲೆ ಅದ್ವೈತ ಸಿದ್ಧಾಂತವನ್ನು ಸ್ಥಾಪಿಸಿರುತ್ತವೆ. ಅನಾದಿ ಸಂಪ್ರದಾಯದಿಂದ ಬಂದ ಔಪನಿಷದ ಸಿದ್ಧಾಂತವೇನೆಂಬುದನ್ನು ಶ್ರೀ ಶಂಕರಾಚಾರ್ಯರು ಈ ಗ್ರಂಥಗಳಲ್ಲಿ ವ್ಯವಸ್ಥಿತವಾದ ರೀತಿಯಿಂದ ಲೋಕಕಲ್ಯಾಣಕ್ಕಾಗಿ ತಿಳಿಸಿಕೊಟ್ಟಿದ್ದಾರೆ.

ಆದರೆ, ಈ ಭಾಷ್ಯಾದಿಗಳು ಪ್ರೌಢ ಶೈಲಿಯಲ್ಲಿದ್ದು ತರ್ಕಾದಿ ಶಾಸ್ತ್ರಗಳಲ್ಲಿ ಪರಿಣತರಾದ ಪಂಡಿತರಿಗೆ ಮಾತ್ರ ಅರ್ಥವಾಗುತ್ತವೆ. ಹಲವಾರು ವಾದ-ವಿವಾದಗಳೂ, ಮತಾಂತರ ಖಂಡನೆಗಳೂ ಇವುಗಳಲ್ಲಿ ಬರುತ್ತವೆ. ತನ್ನ ಶ್ರೇಯಸ್ಸನ್ನು ಬಯಸತಕ್ಕ ಜಿಜ್ಞಾಸುವಿಗೆ ಅವಶ್ಯ ಬೇಕಾದ ಪ್ರಮೇಯಗಳು ಒಂದು ಕಡೆಯಲ್ಲಿ ಕ್ರಮವರಿತು ಸಿಗುವುದಿಲ್ಲ. ಆದ್ದರಿಂದ ಆಚಾರ್ಯರು ಸಾಮಾನ್ಯರಾದ ಸಾಧಕ ಜನರ ಅನುಗ್ರಹಕ್ಕಾಗಿ ವಿವೇಕ ಚೂಡಾಮಣಿ, ಉಪದೇಶಸಾಹಸ್ರೀ—ಮುಂತಾದ ಸುಲಭವಾಗಿ ಅರ್ಥವಾಗುವ ಗ್ರಂಥಗಳನ್ನು ರಚಿಸಿದರು. ವಾದ ಕೋಲಾಹಲವಿಲ್ಲದೆ ಎಷ್ಟು ಬೇಕೋ ಅಷ್ಟು ವಿಷಯಗಳನ್ನು ಇವುಗಳಲ್ಲಿ ಅಳವಡಿಸಿದರು. ಈ ಗ್ರಂಥಗಳಲ್ಲಿ ವಿವೇಕ ಚೂಡಾಮಣಿಯು ವೇದಾಂತ ಗ್ರಂಥ ಚೂಡಾಮಣಿಯೇ ಆಗಿದೆ. ಇದು ಶ್ಲೋಕರೂಪವಾಗಿರುವುದರಿಂದ ನೆನಪಿಡುವುದಕ್ಕೆ ತುಂಬಾ ಉಪಯುಕ್ತವಾಗುತ್ತದೆ. ಬೇರೆ ಬೇರೇ ವೃತ್ತಗಳಲ್ಲಿ 581 ಶ್ಲೋಕಗಳಿವೆ. ಗುರು-ಶಿಷ್ಯ ಸಂಭಾಷಣೆಯ ರೂಪದಲ್ಲಿ ಶ್ರೀ ಶಂಕರ ಭಗವತ್ಪಾದರು ಮುಮುಕ್ಷುವಿಗೆ ಬೇಕಾದ ವಿಚಾರಗಳೆಲ್ಲವನ್ನೂ ಇದರಲ್ಲಿ ಶಾಸ್ತ್ರೀಯವಾಗಿ ನಿರೂಪಿಸಿದ್ದಾರೆ. ಅಧಿಕಾರಿ, ಸಾಧನ ಚತುಷ್ಟಯ,

ಮೋಕ್ಷ ಸಾಧನ, ಇಂದ್ರಿಯಗಳು, ಪುರ್ಯಷ್ಟಕ, ಸೂಕ್ಷ್ಮಶರೀರ, ಮಾಯೆ, ಕಾರಣ ಶರೀರ, ಪಂಚಕೋಶಗಳು, ಆತ್ಮಸ್ವರೂಪ, ಮಹಾವಾಕ್ಯಾರ್ಥ, ಭಕ್ತಿ, ಕರ್ಮ, ಧ್ಯಾನ, ಆತ್ಮಜ್ಞಾನದ ಫಲ—ಮುಂತಾದ ಹಲವು ವಿಚಾರಗಳನ್ನು ನಿಸ್ಸಂಶಯವಾಗಿ ಈ ಗ್ರಂಥದಿಂದ ತಿಳಿದುಕೊಳ್ಳಬಹುದು. ಆತ್ಮಾನಾತ್ಮ ವಿವೇಕ, ಪಂಚಕೋಶ ವಿವೇಕ, ಮುಂತಾದ ಅಂಶಗಳು ಮತ್ತೆ ಮತ್ತೆ ಬರುವಂತೆ ಓದುಗರಿಗೆ ತೋರಬಹುದು. ಇವು ಪುನರುಕ್ತಿಗಳೆಂದು ತಿಳಿಯಬಾರದು. ಈ ವಿಚಾರಗಳನ್ನು ಮುಮುಕ್ಷುವಿನ ಮೇಲೆ ಅಚ್ಚೊತ್ತಬೇಕೆಂಬ ಉದ್ದೇಶದಿಂದಲೇ ಆಚಾರ್ಯರು ಈ ರೀತಿಯಲ್ಲಿ ಬೇರೆ ಬೇರೆ ಪ್ರಕಾರಗಳಿಂದ ಅವನ್ನು ತಿಳಿಸಿಕೊಟ್ಟಿದ್ದಾರೆ. ಎಷ್ಟು ಹೇಳಿದರೂ ಆತ್ಮ ವಿಚಾರವು ದುರ್ಜ್ಞೇಯವಾದ್ದರಿಂದ ಈ ಪ್ರಕಾರದಲ್ಲಿ ತಿಳಿಸುವುದು ಗ್ರಂಥಕ್ಕೆ ಭೂಷಣವೇ ಆಗುತ್ತದೆ.

ವಿವೇಕ ಚೂಡಾಮಣಿ ಎಂಬ ಹೆಸರು ಈ ಗ್ರಂಥಕ್ಕೆ ಒಪ್ಪುತ್ತದೆ, ಆತ್ಮಾನಾತ್ಮ ವಿವೇಕವೇ ಇಲ್ಲಿ ಪ್ರಧಾನವಾಗಿ ಪ್ರಸ್ತುತ. ಆತ್ಮ ಯಾವುದು, ಅನಾತ್ಮ ಯಾವುದು —ಎಂಬುದನ್ನು ವಿಂಗಡಿಸಿ ವಿವೇಚಿಸುವುದೇ ವಿವೇಕ. ಚೂಡಾಮಣಿ–ಎಂದರೆ ಶಿರೋಮಣಿ–ಶ್ರೇಷ್ಠ ಎಂದರ್ಥ. ಯಾವುದು ಆತ್ಮಾನಾತ್ಮ ವಿವೇಕವನ್ನು ಶ್ರೇಷ್ಠ ರೀತಿಯಲ್ಲಿ ಮಾಡುತ್ತದೆಯೋ ಆ ಗ್ರಂಥ ವಿವೇಕ ಚೂಡಾಮಣಿ. ಭಗವದ್ಗೀತೆಯಂತೆ ಇದು ಅತ್ಯಂತ ಪ್ರಸಿದ್ಧವೂ, ವೇದಾಂತಿಗಳಿಗೆ ಪ್ರಿಯವೂ ಆದ ಗ್ರಂಥ. ವೇದಾಂತ ಪ್ರವಚನಕ್ಕೆ ಅತೀವ ಉಪಯುಕ್ತವಾದದ್ದು. ಶ್ಲೋಕಗಳನ್ನು ಆಚಾರ್ಯರು ಸುಲಭ ಶೈಲಿಯಲ್ಲಿ ಅನುಗ್ರಹಿಸಿದ್ದರೂ, ವಿಷಯದ ಸ್ಪಷ್ಟೀಕರಣಕ್ಕಾಗಿ ವ್ಯಾಖ್ಯಾನ ಆವಶ್ಯಕ ವಾಗುತ್ತದೆ. ಇದನ್ನು ಮನಗಂಡು ಬ್ರಹ್ಮೀಭೂತರಾದ ಶ್ರೀ ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳವರು ವಿವೇಕ ಚೂಡಾಮಣಿಗೆ ಒಂದು ವಿಸ್ತೃತವಾದ ವ್ಯಾಖ್ಯಾನವನ್ನು ರಚಿಸಿಕೊಟ್ಟಿದ್ದಾರೆಂಬುದು ನಮೆಲ್ಲರ ಭಾಗ್ಯವಾಗಿದೆ. ಸರ್ವತಂತ್ರ ಸ್ವತಂತ್ರರೂ, ಸ್ವಯಂ ಸಿದ್ಧಪುರುಷರೂ ಆಗಿದ್ದ ಮಹಾಸ್ವಾಮಿಗಳ ಈ ವ್ಯಾಖ್ಯಾನ ಅತ್ಯಂತ ಪ್ರಾಮಾಣಿಕವಾದದ್ದೆಂದೂ, ಸರ್ವೋತ್ಕೃಷ್ಟವಾದದ್ದೆಂದೂ ಮತ್ತೆ ಹೇಳ ಬೇಕಾದ್ದಿಲ್ಲ. ಈ ಲೇಖನವು ಪೂಜ್ಯ ಗುರುಗಳ ಉತ್ಕೃಷ್ಟತೆಯನ್ನೂ ವೈಶಿಷ್ಟ್ಯವನ್ನೂ ಪರಿಚಯ ಮಾಡಿಕೊಡುವುದಕ್ಕೆ ಮಾತ್ರ ಸೀಮಿತವಾಗಿದೆ. ಎಲ್ಲ ಅಂಶಗಳನ್ನೂ ಪ್ರಸ್ತಾಪಿಸಿದರೆ ಲೇಖನವು ಬಹು ವಿಸ್ತೃತವಾಗುತ್ತದೆಯಾದ್ದರಿಂದ ಪರಿಚಯಕ್ಕಾಗಿ ಕೆಲವೇ ಸಂದರ್ಭಗಳನ್ನು ಇಲ್ಲಿ ಕೊಡಲಾಗಿದೆ.

ಆರಂಭದಲ್ಲಿಯೇ ವಿವೇಕ ಚೂಡಾಮಣಿಯ ಶ್ಲೋಕ ಹೀಗಿದೆ—

**ಜಂತೂನಾಂ ನರಜನ್ಮ ದುರ್ಲಭಮತಃ ಪುಂಸ್ತ್ವಂ ತತೋವಿಪ್ರತಾ**
**ತಸ್ಮಾದ್ವೈದಿಕ ಧರ್ಮಮಾರ್ಗಪರತಾ ವಿದ್ವತ್ತ್ವಮಸ್ಮಾತ್ಪರಮ್ ।**

**ಆತ್ಮಾನಾತ್ಮ ವಿವೇಚನಂ ಸ್ವನುಭವೋ ಬ್ರಹ್ಮಾತ್ಮನಾ ಸಂಸ್ಥಿತಿಃ**
**ಮುಕ್ತಿರ್ನೋ ಶತಕೋಟಿ ಜನ್ಮ ಸುಕೃತೈಃ ಪುಣ್ಯೈರ್ವಿನಾ ಲಭ್ಯತೇ ||**

ಈ ಶ್ಲೋಕದಲ್ಲಿ ಶ್ರೀ ಶಂಕರ ಭಗವತ್ಪಾದರು—'ಪ್ರಾಣಿಗಳಿಗೆ ಮನುಷ್ಯ ಜನ್ಮ ದುರ್ಲಭ. ಅದಕ್ಕಿಂತ ಪುರುಷತ್ವ, ಬ್ರಾಹ್ಮಣ್ಯ, ವೈದಿಕ ಮಾರ್ಗಪರತ್ವ, ವಿದ್ವತ್ವ, ಆತ್ಮಾನಾತ್ಮ ವಿವೇಕ, ಅನುಭವ, ಮುಕ್ತಿ—ಇವು ಕ್ರಮವಾಗಿ ಅತ್ಯಂತ ದುರ್ಲಭಗಳು'—ಎಂದು ತಿಳಿಸಿದ್ದಾರೆ. ಇವು ಒಂದಕ್ಕಿಂತ ಇನ್ನೊಂದು ಹೇಗೆ ಅತ್ಯಂತ ದುರ್ಲಭಗಳೆಂಬುದನ್ನು ಮಹಾಸ್ವಾಮಿಗಳು ಸಮಂಜಸವಾಗಿ ತಮ್ಮ ವ್ಯಾಖ್ಯಾನದಲ್ಲಿ ಉಪಪಾದಿಸಿದ್ದಾರೆ—ಪಶು ಪಕ್ಷಿ ಕೀಟಾದಿಗಳಿಗಿಂತ ಜ್ಞಾನಶಕ್ತಿಯುಳ್ಳ ಮನುಷ್ಯ ಜನ್ಮ ದುರ್ಲಭವೆಂಬುದು ಸ್ಪಷ್ಟವಾಗಿದೆ. ವೇದಾಧಿಕಾರವು ಸ್ತ್ರೀಯರಿಗಿಲ್ಲವಾದ್ದರಿಂದ ಪುರುಷ ಜನ್ಮವು ವೇದಾಧಿಕಾರವನ್ನು ದೊರಕಿಸಿಕೊಡುತ್ತದೆ. ವೇದಾಧಿಕಾರವುಳ್ಳ ತ್ರೈವರ್ಣಿಕರಲ್ಲಿ ಕ್ಷತ್ರಿಯ, ವೈಶ್ಯರಿಗೆ ರಾಜ್ಯಪಾಲನ, ವಾಣಿಜ್ಯಾದಿಗಳು ಕರ್ತವ್ಯವಾದ್ದರಿಂದ ಅವರಿಗೆ ಚಿತ್ತವಿಕ್ಷೇಪವು ಅಧಿಕ. ಬ್ರಾಹ್ಮಣನಿಗೆ ಆತ್ಮವಿಚಾರಕ್ಕೆ ಹೆಚ್ಚಿನ ಅವಕಾಶವಿರುವುದರಿಂದ ಆಜನ್ಮ ಉತ್ಕೃಷ್ಟವಾದದ್ದು. ಬ್ರಾಹ್ಮಣನಾದರೂ ವೈದಿಕ ಧರ್ಮ ಮಾರ್ಗಪರತಾ ಇನ್ನೂ ಪುಣ್ಯವಿಶೇಷದಿಂದಲೇ ಲಭ್ಯ. ಅದರಲ್ಲಿಯ ಪಾಂಡಿತ್ಯವು ಅಧಿಕವೆಂಬುದು ಸ್ಪಷ್ಟವಾಗಿದೆ. ಅನಂತರ ಆತ್ಮಾನಾತ್ಮ ವಿವೇಚನದಲ್ಲಿ ಪ್ರವೃತ್ತಿಯೂ ಬ್ರಹ್ಮಸಾಕ್ಷಾತ್ಕಾರವೂ, ಬ್ರಹ್ಮಾತ್ಮನಾ ಸಂಸ್ಥಿತಿ ರೂಪವಾದ ಮುಕ್ತಿಯೂ ದುರ್ಲಭವಾದವು. ಈ ವಿಚಾರವನ್ನು ವ್ಯಾಖ್ಯಾನದಲ್ಲಿ ನಾನಾ ಪ್ರಮಾಣಗಳನ್ನು ಕೊಟ್ಟು ಮನೋಜ್ಞವಾಗಿ ವಿವರಿಸಲಾಗಿದೆ. ಈ ಸಂದರ್ಭದಲ್ಲಿ ಮಹಾಸ್ವಾಮಿಗಳು ವಸಿಷ್ಠ ಸ್ಮೃತಿಯಿಂದ ಉದ್ಧರಿಸಿ ಹೇಳಿದ ಒಂದು ಶ್ಲೋಕವು ಮನನೀಯವಾಗಿದೆ. ಬ್ರಾಹ್ಮಣನಾದವನು ಇದನ್ನು ಮತ್ತೆ ಮತ್ತೆ ಅನುಸಂಧಾನ ಮಾಡಿಕೊಳ್ಳಲು ಅರ್ಹವಾದದ್ದು–

**ಬ್ರಾಹ್ಮಣಸ್ಯ ತು ದೇಹೋಽಯಂ ನೋಪಭೋಗಾಯ ಕಲ್ಪತೇ |**
**ಇಹ ಕ್ಲೇಶಾಯ ಮಹತೇ ಪ್ರೇತ್ಯಾನಂತ ಸುಖಾಯ ಚ ||**

"ಬ್ರಾಹ್ಮಣನ ಈ ದೇಹವು ಸುಖಭೋಗಕ್ಕಾಗಿ ಅಲ್ಲ ; ಈ ದೇಹವಿರುವುದು ಈ ಲೋಕದಲ್ಲಿ ಮಹತ್ತರವಾದ ಕಷ್ಟವನ್ನು ಅನುಭವಿಸುವುದಕ್ಕಾಗಿ ಮತ್ತು ಮರಣಾನಂತರ ಅನಂತ ಸುಖವನ್ನು ಪಡೆಯುವುದಕ್ಕಾಗಿ". ಬ್ರಾಹ್ಮಣರು ಸ್ವಾರ್ಥ ಲಾಭಕ್ಕಾಗಿ ಧರ್ಮಶಾಸ್ತ್ರವನ್ನು ರಚಿಸಿಕೊಂಡು ತಾವೇ ಶ್ರೇಷ್ಠರೆಂದು ಮೆರೆಯುತ್ತಾರೆ—ಎಂಬ ಆಧುನಿಕರ ಆಕ್ಷೇಪಣೆಗಳಿಗೆ ಮೊಳಕೆಯಂಡ ವಸಿಷ್ಠ ಸ್ಮೃತಿಯ ಶ್ಲೋಕವು ಸಮರ್ಥವಾದ ಉತ್ತರವನ್ನೀಯುತ್ತದೆ.

ವೇದಾಂತ ವಿಚಾರಕ್ಕೆ ಅಧಿಕಾರಿಯಾಗಬೇಕಾದರೆ, ಆತನು ಸಾಧನ ಚತುಷ್ಟಯ ಸಂಪನ್ನನಾಗಿರಬೇಕು. ನಿತ್ಯಾನಿತ್ಯವಸ್ತು ವಿವೇಕ, ಇಹಾಮುತ್ರ ಫಲಭೋಗವಿರಾಗ,

ಶಮದಮಾದಿಷಟ್ಕಸಂಪತ್ತಿ, ಮುಮುಕ್ಷುತ್ವ-ಇವೇ ಆ ಸಾಧನಗಳು. ಇವನ್ನು ಎಲ್ಲ ವೇದಾಂತ ಗ್ರಂಥಗಳಲ್ಲಿಯೂ ತಿಳಿಸಿರುತ್ತಾರೆ. ಈ ನಾಲ್ಕನ್ನು ಒಂದೇ ಕ್ರಮದಲ್ಲಿ ಹೇಳುವ ಉದ್ದೇಶವೇನು ? ಎಂಬುದನ್ನು ಮಹಾಸ್ವಾಮಿಗಳು ವ್ಯಾಖ್ಯಾನದಲ್ಲಿ ತೋರಿಸಿ ಕೊಟ್ಟಿದ್ದಾರೆ. ಇಂತಹ ವಿವರಣೆಯನ್ನು ಬೇರಿನ್ನಾವ ಗ್ರಂಥದಲ್ಲೂ ಕಾಣುವುದು ದುರ್ಲಭ. ಇವು ಕ್ರಮವಾಗಿ ಒಂದಕ್ಕೊಂದು ಕಾರಣಗಳು. ಇದು ನಿತ್ಯ-ಇದು ಅನಿತ್ಯ ಎಂಬ ವಿವೇಚನೆ ಮೊದಲು ಆಗಬೇಕು. ಈ ವಿವೇಕ ಜ್ಞಾನವಿದ್ದರೆ ಮಾತ್ರ ಮುಂದಿನ ವೈರಾಗ್ಯ ಹುಟ್ಟುತ್ತದೆ. "ಈ ಲೋಕದಲ್ಲಾಗಲೀ ಪರಲೋಕದಲ್ಲಾಗಲೀ ದೊರಕುವ ಸುಖ-ಭೋಗಗಳು ಅನಿತ್ಯವಾದವು" ಎಂಬ ಬುದ್ಧಿಯೇ 'ಅನಿತ್ಯವಾದುದು ನನಗೆ ಸರ್ವಥಾಬೇಡ' ಎಂಬ ವೈರಾಗ್ಯಕ್ಕೆ ನಿಮಿತ್ತವಾಗುತ್ತದೆ. ಈ ವೈರಾಗ್ಯವಿದ್ದ ಹೊರತು ಶಮದಮಾದಿಗಳು ದುರ್ಲಭ. ಶಮವೆಂದರೆ ಅಂತರಿಂದ್ರಿಯದ ನಿಗ್ರಹ. ಮನೋನಿಗ್ರಹವಾದರೆ ದಮವು ಸಾಧ್ಯ. ದಮವೆಂದರೆ ಬಹಿರಿಂದ್ರಿಯ ನಿಗ್ರಹ. ಶಮವಿದ್ದರೆ ದಮವು ಸ್ವತಃ ಸಿದ್ಧವಾದ್ದರಿಂದ ದಮವನ್ನೇಕೆ ಪರಿಗಣಿಸಬೇಕು ? ಎಂಬ ಪ್ರಶ್ನೆ ಹುಟ್ಟಬಹುದು. ಇದಕ್ಕೆ ಮಹಾಸ್ವಾಮಿಗಳು ಉತ್ತರ ಅಪ್ಪಣೆಕೊಡಿಸುವು ದೇನೆಂದರೆ, ಶಮವು ದೃಢವಾಗುವುದಕ್ಕಾಗಿ ಬಾಹ್ಯೇಂದ್ರಿಯಗಳ ನಿಗ್ರಹವೂ ಬೇಕು. ಇಲ್ಲದಿದ್ದರೆ, **"ಇಂದ್ರಿಯಾಣಿ ಪ್ರಮಾಥೀನಿ ಹರಂತಿ ಪ್ರಸಭಂ ಮನಃ"** ಎಂಬ ಗೀತೋಕ್ತಿಯಂತೆ ಇಂದ್ರಿಯಗಳು ಮನಸ್ಸನ್ನು ಸೆಳೆದು ಶಮವನ್ನು ಕೆಡಿಸಿಬಿಡುತ್ತವೆ. ಹೀಗೆ ಜಿತೇಂದ್ರಿಯನಾದ ಮೇಲೆ ಮುಂದಿನ ಉಪರಮ. ಇಂದ್ರಿಯಗಳನ್ನು ನಿಗ್ರಹಿಸಿದ್ದರಿಂದ ಮನಸ್ಸು ಇಂದ್ರಿಯಗಳ ಮೂಲಕ ಹರಿದು ವಿಷಯಗಳೊಡನೆ ಸೇರಿಕೊಳ್ಳುವುದಿಲ್ಲ. ಉಪರಮವೆಂದರೆ ಒಂದು ಬಗೆಯ ಸಂನ್ಯಾಸವೇ. ಈ ಉಪರಮ ಒದಗಿದಾಗ ಶೀತೋಷ್ಣಾದಿಗಳನ್ನು ಸಹಿಸಿಕೊಳ್ಳುವ ತಿತಿಕ್ಷೆ ಹುಟ್ಟುತ್ತದೆ. ಇವೆಲ್ಲ ಇದ್ದರೆ ಮಾತ್ರ-"ಬ್ರಹ್ಮ ಸತ್ಯಂ ಜಗನ್ಮಿಥ್ಯಾ"-ಎಂದು ಗುರು ಉಪದೇಶಿಸುವ ವೇದಾಂತ ವಾಕ್ಯದಲ್ಲಿ ಶ್ರದ್ಧೆ ಹುಟ್ಟುತ್ತದೆ. ಈ ಶ್ರದ್ಧೆಯೇ ಸಮಧಾನ. ಈ ಮೂರು ಸಾಧನಗಳನ್ನು ಅಳವಡಿಸಿಕೊಂಡ ಧೀರನು ಮೋಕ್ಷಕ್ಕಿಂತ ಬೇರೊಂದನ್ನು ಬಯಸುವುದಿಲ್ಲ. ಆಗ ನಿಜವಾದ ಮುಮುಕ್ಷುತೆ ಹುಟ್ಟುತ್ತದೆ. ಹೀಗೆ ಈ ಸಾಧನ ಸಂಪತ್ತುಗಳಿಗೆ ಕಾರ್ಯಕಾರಣಭಾವವಿರುವುದರಿಂದ ಕ್ರಮವಾಗಿ ಇದನ್ನು ಸಾಧಿಸಿಕೊಂಡು ವೇದಾಂತ ಶ್ರವಣಕ್ಕೆ ಅಧಿಕಾರಿಯಾಗಲು ಈ ವಿವರಣೆ ಉಪಯುಕ್ತವಾಗುತ್ತದೆ.

ಇಂತಹ ಅಧಿಕಾರಿಯಾದ ಒಬ್ಬ ಶಿಷ್ಯನು ಗುರುವಿನ ಬಳಿಗೆ ಹೋಗಿ 'ಸಂಸಾರ ವೆಂದರೇನು ? ಇದು ಹೇಗೆ ಬಂದಿದೆ ? ಇದಕ್ಕೆ ಪರಿಹಾರವೇನು ?' ಎಂದು ವಿನಯದಿಂದ ಪ್ರಶ್ನೆಮಾಡುತ್ತಾನೆ. ಆಗ ಗುರುವು ಈ ರೀತಿ ಹೇಳುತ್ತಾನೆ—ಎಂದು ವಿವೇಕ ಚೂಡಾ ಮಣಿಯಲ್ಲಿದೆ.

ಶ್ರೀ ಗುರುರುವಾಚ—

**ಧನ್ಯೋಽಸಿ ಕೃತಕೃತ್ಯೋಽಸಿ ಪಾವಿತಂ ತೇ ಕುಲಂ ತ್ವಯಾ ।**
**ಯದವಿದ್ಯಾ ಬಂಧಮುಕ್ತ್ಯಾ ಬ್ರಹ್ಮೀಭವಿತುಮಿಚ್ಛತಿ ॥**

ಈ ಸಂದರ್ಭದಲ್ಲಿರುವ ವ್ಯಾಖ್ಯಾನವು ತುಂಬ ಗಮನಾರ್ಹವಾಗಿದೆ. ಶ್ರೀ ಗುರು ಎಂಬಲ್ಲಿ ಶ್ರೀ ಶಬ್ದವಿದೆಯಷ್ಟೇ. ಇದನ್ನು ಗೌರವಾರ್ಥದಲ್ಲಿ ಬಳಸುತ್ತಾರೆಂದು ಮಾತ್ರ ನಾವು ತಿಳಿದುಕೊಂಡಿದ್ದೇವೆ. ಆದರೆ ವ್ಯಾಖ್ಯಾನಕಾರರು ಹೇಳುವ ಅರ್ಥ ಎಷ್ಟು ತೂಕವುಳ್ಳದ್ದಾಗಿದೆಯೆಂಬುದನ್ನು ಕಾಣಬಹುದು. ಅವರು ಹೇಳುತ್ತಾರೆ–"**ಋಚಃ ಸಾಮಾನಿ ಯಜೂಂಷಿ, ಸಾ ಹಿ ಶ್ರೀರಮೃತಾಸತಾಂ**"–ಎಂಬ ಶ್ರುತಿಯು ಶಬ್ದ ರೂಪಗಳಾದ ವೇದಗಳಿಗೇ 'ಅಮೃತವಾದ ಶ್ರೀ ಸಂಪತ್ತು' ಎಂದು ಹೇಳಿದೆ. ಹೀಗಿರುವಾಗ ಸಕಲ ವೇದಾಂತಗಳನ್ನೂ ಅದರ ಅರ್ಥಗಳನ್ನೂ ಸಾಕ್ಷಾತ್ಕರಿಸಿಕೊಂಡಿರುವ ಗುರುವು ಶ್ರೀಯುತನೆಂಬುದರಲ್ಲಿ ಸಂದೇಹವೇನಿದೆ ?–ಎಂದು. ಶ್ರೀ ಎಂದರೆ ವೇದವೇದಾರ್ಥ ಜ್ಞಾನಸಂಪತ್ತು ಎಂದರ್ಥ. ಅನಂತರ ಗುರುವು ಶಿಷ್ಯನನ್ನು "ನೀನು ಧನ್ಯ. ಕೃತಕೃತ್ಯ ನಿನ್ನ ಕುಲ ಪಾವನವಾಯಿತು"–ಎಂದು ಹೇಳುತ್ತಾರೆ. ಈ ಹೊಗಳಿಕೆ ಶಿಷ್ಯನ ಮನಸ್ಸನ್ನು ವಿಕಾಸಗೊಳಿಸುವುದಕ್ಕಾಗಿ, ಧನ್ಯನೆಂದರೇನು ? ಧನಕ್ಕೆ ಅರ್ಹನಾದವನು ಧನ್ಯ ಎಂದು ಶಬ್ದಾರ್ಥ. ಶಿಷ್ಯನಲ್ಲ ಧನ ಯಾವುದಿದೆ ? ವೈರಾಗ್ಯಭಾಗ್ಯವೆಂಬ ಧನವಿದೆ. ಹೇಗೆಂದರೆ–

ಸ ಖಲು ಧನಿತ್ವಂ ಜಾತಿಃ ಯಸ್ಯ ಯದಿಷ್ಟಂ ತದೇವ ತಸ್ಯ ಧನಮ್ ।
ತತ್ತ್ವದಿವ ಪಾಮರಾಣಾಂ ಆಕಿಂಚನ್ಯಂ ಧನಂ ವಿದುಷಾಮ್ ॥

ಎಷ್ಟು ಸೊಗಸಾದ ಅರ್ಥವಿವರಣೆ ಇದು ! ಧನ್ಯನೆಂದು ಹೇಳಿದ ಮೇಲೆ ಕೃತಕೃತ್ಯ ಎಂದು ಹೇಳಿದ್ದು ಪುನರುಕ್ತವೆಂದು ನಮ್ಮಂತಹವರಿಗೆ ಭಾಸವಾಗುತ್ತದೆ. ಮಹಾಸ್ವಾಮಿಗಳು ಬರೆಯುವುದೇನೆಂದರೆ–ವರ್ಣಾಶ್ರಮೋಚಿತವಾದ ಶಾಸ್ತ್ರೀಯ ಕೃತ್ಯಗಳನ್ನು ಮಾಡಿದವನು ಕೃತಕೃತ್ಯ ಎಂದು. ನಿಷ್ಕಾಮ ಕರ್ಮಯೋಗದಿಂದ ಚಿತ್ತಶುದ್ಧಿಯನ್ನು ಪಡೆದು ಬ್ರಹ್ಮೋಪದೇಶಕ್ಕೆ ಅರ್ಹನಾದ ಶಿಷ್ಯ ಕೃತಕೃತ್ಯ. "**ಪಾವಿತಂ ತೇ ಕುಲಂ ತ್ವಯಾ**" ಎಂಬುದನ್ನು "**ಕುಲಂ ಪವಿತ್ರಂ ಜನನೀ ಕೃತಾರ್ಥ**"– ಎಂಬ ಪ್ರಮಾಣವಚನದಿಂದ ಸಮರ್ಥಿಸಲಾಗಿದೆ. ಹಾಗೆಯೇ ಬ್ರಹ್ಮಸೂತ್ರದ ನಿರಂಜನ ಭಾಷ್ಯದಿಂದ "**ಸ್ನಾತಂ ತೇನ ಪವಿತ್ರ ತೀರ್ಥಸಲಿಲೇ**" ಎಂಬ ಶ್ಲೋಕವನ್ನು ಉದ್ಧರಿಸಿ ಪೂರ್ವೋಕ್ತ ವಿಷಯವನ್ನು ಪೋಷಿಸಲಾಗಿದೆ. "**ಬ್ರಹ್ಮೀಭವಿತುಂ**" ಎಂಬಲ್ಲಿ "ಚ್ವಿ" ಪ್ರತ್ಯಯವು ವ್ಯಾಕರಣ ಶಾಸ್ತ್ರದ ದೃಷ್ಟಿಯಿಂದ ಹೇಗೆ ಯುಕ್ತವಾಗುತ್ತದೆ ಎಂಬುವನ್ನು ಪರಿಶೀಲಿಸಲಾಗಿದೆ.

'ಜ್ಞಾನದಿಂದ ಮೋಕ್ಷವು ಸಿದ್ಧಿಸುತ್ತದೆ'–ಎಂಬ ಮಾತನ್ನು ವೇದಾಂತ ಗ್ರಂಥಗಳಲ್ಲಿ ನಾವು ಬಹಳ ಕಡೆ ನೋಡುತ್ತೇವೆ. ಹಾಗೆಂದರೇನು ? 'ಜ್ಞಾನದಿಂದ

ಮೋಕ್ಷವು ಹುಟ್ಟುತ್ತದೆ–ಜ್ಞಾನವು ಮೋಕ್ಷವನ್ನು ಹುಟ್ಟಿಸುತ್ತದೆ' ಎಂದರ್ಥವೇ? ಹಾಗೆ ಹೇಳಿದರೆ, ಮೋಕ್ಷವು ಜ್ಞಾನಜನ್ಯವೆಂದೂ, ಹೊಸದಾಗಿ ಹುಟ್ಟುತ್ತದೆಯೆಂದೂ ಹೇಳಿದಂತಾಗುತ್ತದೆ. ಜನ್ಯವಾದದ್ದು ಅನಿತ್ಯವೆಂದು ಎಲ್ಲರೂ ಒಪ್ಪಿದ್ದಾರೆ. ಮೋಕ್ಷವು ಜ್ಞಾನಜನ್ಯವಾದರೆ, ಅನಿತ್ಯವಾಗಬೇಕಾಗುತ್ತದೆ. ಮೋಕ್ಷವಾದವರಿಗೂ ಮತ್ತೆ ಸಂಸಾರಬಂಧವುಂಟೆಂದು ಒಪ್ಪಬೇಕಾಗುತ್ತದೆ. ಇದು ಶಾಸ್ತ್ರವಿರುದ್ಧವಾದದ್ದು, ಮೋಕ್ಷವು ನಿತ್ಯ. ಮುಕ್ತನಿಗೆ ಪುನಃ ಸಂಸಾರಬಂಧವಿಲ್ಲ. ಆದ್ದರಿಂದ ಮೋಕ್ಷವು ಸಿದ್ಧವಾದ ಬ್ರಹ್ಮಭಾವವೇ. ಜ್ಞಾನದಿಂದ ಮೋಕ್ಷ ಎಂದರೆ, ಜ್ಞಾನವು ಬ್ರಹ್ಮಭಾವಕ್ಕೆ ಅಭಿವ್ಯಂಜಕವೆಂದರ್ಥ. ಈ ವಿಷಯವನ್ನು ಸ್ಪಷ್ಟಮಾಡುವುದಕ್ಕಾಗಿ ಮಹಾಸ್ವಾಮಿಗಳು ತಮ್ಮ ವ್ಯಾಖ್ಯಾನದಲ್ಲಿ ಮೂರು ದೃಷ್ಟಾಂತಗಳನ್ನು ಕೊಟ್ಟಿದ್ದಾರೆ.

(ಸಶೇಷ)

ವಿದ್ವಾನ್ ಎನ್. ರಂಗನಾಥಶರ್ಮ

*With best compliments from :*

RITZ GROUP OF HOTELS

*When you visit Mysore,*
*please stay at*

HOTEL METROPOLE or
HOTEL KRISHNARAJA SAGAR

RITZ HOTEL (Mysore) Limited,
Jhansi Laxmibai Road,
MYSORE – 570 005
Telephone No. 20681